



ಪ್ರಬುದ್ಧ ಟ್ರೋಜನ್‌ಗಳಿಗೆ ಹತ್ತರಿಂದ ಹನ್ನೆರಡು ಗರಿಗಳಿದ್ದು ಇವುಗಳ ಕಣ್ಣು ಹಾಗೂ ಕೊಕ್ಕಿನ ಸುತ್ತ ಸಂಪೂರ್ಣವಾಗಿ ಗಾಢ ನೀಲಿ ಬಣ್ಣವನ್ನು ಹೊಂದಿರುತ್ತವೆ. ಇವುಗಳ ಕಣ್ಣಿನ ಪೊರೆ ಗಾಢ ಬೂದು ಹಾಗೂ ಇದರ ಪಾದಗಳು ನಸು ನೀಲಿ ಬಣ್ಣವನ್ನು ಹೊಂದಿವೆ. ಅಪಾಯದ ಸಂದರ್ಭಗಳಲ್ಲಿ ಇವುಗಳ ವಿಶಿಷ್ಟ ಮೈಬಣ್ಣದ ಕಾರಣದಿಂದಾಗಿ ತಾನು ಕುಳಿತಿರುವ ಕೊಂಬೆಗಳಿಗೇ ಗಟ್ಟಿಯಾಗಿ ಅಂಟಿಕೊಂಡು ಕುಳಿತು ವೈರಿಯ ಕಣ್ಣಿನಿಂದ ತಪ್ಪಿಸಿಕೊಳ್ಳುತ್ತವೆ. ಇವು ಕೀಟಭಕ್ಷಕ. ಸಾಮಾನ್ಯವಾಗಿ ವಲಸೆ ಹೋಗುವುದಿಲ್ಲ. ಹೆಚ್ಚು ಮಳೆ ಬೀಳುವಾಗ ಹಾಗೂ ಚಳಿಯ ಸಂದರ್ಭಗಳಲ್ಲಷ್ಟೇ ಪರ್ವತ ಪ್ರದೇಶದ ಅರಣ್ಯಗಳೆಡೆಗೆ ವಲಸೆ ಹೋಗುತ್ತವೆ.

ತನ್ನ ಪರಿವಾರದ ಇತರ ಪಕ್ಷಿಗಳ ಕೂಗಿಗೆ ತಮ್ಮ ಬಾಲವನ್ನು ಮೇಲೆ ಕೆಳಗೆ ಅಲ್ಲಾಡಿಸುವ ಮೂಲಕ ಪ್ರತಿಕ್ರಿಯೆ ನೀಡುತ್ತವೆ. ಕೂಗು ಗಂಟಲೊಳಗಿಂದ ಸಂಗೀತವನ್ನು ಗೊಣಗಿದಂತೆ ಕೇಳಿಬರುತ್ತದೆ. ಭಾರತದಲ್ಲಿ ಮಳೆಗಾಲಕ್ಕಿಂತ ಮೊದಲು ಅಂದರೆ ಫೆಬ್ರುವರಿಯಿಂದ ಮೇ ತಿಂಗಳಿನ ಮಧ್ಯದಲ್ಲಿ ಮತ್ತು ಶ್ರೀಲಂಕಾದಲ್ಲಿ ಮಾರ್ಚ್‌ನಿಂದ ಜೂನ್ ತಿಂಗಳ ಮಧ್ಯದಲ್ಲಿ ಸಂತಾನೋತ್ಪತ್ತಿಯನ್ನು ಮಾಡುತ್ತವೆ.

ನೆಲದ ಮೇಲ್ಪದರದ ಮಣ್ಣು, ಕಸ ಹಾಗೂ ತರಗೆಲೆಗಳನ್ನು ಅಗೆದು ಅದರೊಳಗಿರುವ ಕೀಟಗಳು, ಹುಳು ಹುಪ್ಪಟಗಳನ್ನು ತಿಂದು ಬದುಕುತ್ತವೆ. ಜೀವಂತ ಕೀಟಗಳನ್ನು ಗಾಳಿಯಲ್ಲಿ ಹಾರುವಂತೆ ಮಾಡಿ ಅಲ್ಲಿಂದ ಅವುಗಳನ್ನು ಬೇಟೆಯಾಡಿ ತಿನ್ನುವುದು ಇವುಗಳ ವಿಶೇಷತೆಯಲ್ಲೊಂದು. ಮಲಬಾರ್ ಟ್ರೋಜನ್‌ಗಳು ಅತಿಯಾದ ಅರಣ್ಯನಾಶದ ಕಾರಣದಿಂದ ವಿನಾಶದ ಅಂಚಿನಲ್ಲಿವೆ ಎಂದು ಪಕ್ಷಿ ತಜ್ಞ ಡಾ. ಸಲೀಂ ಅಲಿಯವರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.